# ಕರ್ನಾಟಕ ವಿಧಾನ ಪರಿಷತ್ತು

**ವಿಷಯ:-** ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಸಲೀಂ ಅಹ್ಮದ್ ಇವರ ನಿಯಮ 72ರಡಿ - ರಾಜ್ಯದಲ್ಲಿರುವ ಬಡ ಜನರ ಆರೋಗ್ಯ ಸುಧಾರಣೆಗೆಂದು ಕಡಿಮೆ ಬೆಲೆಯಲ್ಲಿ ಔಷಧಗಳು ಲಭ್ಯವಾಗಬೇಕು ಎಂಬ ಕಾರಣಕ್ಕೆ ಭಾರಿ ಮಹತ್ವಾಕಾಂಕ್ಷೆಯೊಂದಿಗೆ 2008ರಲ್ಲಿ ಆರಂಭವಾದ ಜನೌಷಧ ಕೇಂದ್ರಗಳಲ್ಲಿ ಸಕ್ಕರೆ ಕಾಯಿಲೆ, ರಕ್ತದ ಒತ್ತಡ, ಇನ್ನಿತರ ಪ್ರಮುಖ ಖಾಯಿಲೆಗಳಿಗೆ ಅಗತ್ಯವಾಗಿ ಬೇಕಾಗಿರುವ ಔಷಧಗಳೇ ಲಭ್ಯವಿಲ್ಲದಂತಾಗಿದೆ. ವಿಶೇಷವಾಗಿ ರಕ್ತದೊತ್ತಡ, ಮಧುಮೇಹ ಸಂತ್ರಸ್ತರು ಕಡಿಮೆದರ ಎಂದು ಜನೌಷಧ ಕೇಂದ್ರಗಳನ್ನೇ ಅವಲಂಭಿಸಿರುತ್ತಾರೆ. ಪ್ರತಿ 10 ಜನರ ಪೈಕಿ ಏಳು ಜನರಿಂದ ಈ ಔಷಧಗಳಿಗೆ ಬೇಡಿಕೆ ಇರುತ್ತದೆ. ಆದರೆ, ಇವುಗಳನ್ನು ಕೆಲ ತಿಂಗಳುಗಳಿಂದ ಸರಿಯಾಗಿ ಪೂರೈಕೆ ಮಾಡದೇ ಇರುವುದರಿಂದ, ಬಡ ಜನರು ಖಾಸಗಿ ಔಷಧಾಲಯದಲ್ಲಿ ಹೆಚ್ಚಿನ ಹಣವನ್ನು ಕೊಟ್ಟು ಖರೀದಿಸಲು ಶಕ್ತರಿಲ್ಲದ ಕಾರಣ ಔಷಧಿಗಳನ್ನೆ ತೆಗೆದುಕೊಳ್ಳದೇ ತಮ್ಮ ಪ್ರಾಣಕ್ಕೆ ಕುತ್ತು ತಂದುಕೊಳ್ಳುವ ವಿಚಾರವು ಆತಂಕಕಾರಿ ವಿಷಯವಾಗಿದೆ. ಇದರಿಂದ ಸರ್ಕಾರವು ಖಾಸಗಿ ಮೆಡಿಕಲ್ ಲಾಬಿಗೆ ಮಣಿಯುತ್ತಿರುವುದು ಒಂದು ಕಾರಣವಾಗಿದೆ. ಈ ಎಲ್ಲಾ ಕಾರಣದಿಂದ ಹೊಸ ಔಷಧಗಳ ಪರಿಚಯ ಆಗುತ್ತಿಲ್ಲ, ಈ ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ ಈ ವಿಷಯವನ್ನು ನಿಯಮ 72 ಅಡಿಯಲ್ಲಿ ಸದನದ ಗಮನ ಸೆಳೆಯ ಬಯಸುತ್ತೇನೆ.

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಉತ್ತರ.**

ರಾಜ್ಯದಲ್ಲಿನ ಸರ್ಕಾರಿ ಆಸ್ಪತ್ರೆಗಳಾದ ಜಿಲ್ಲಾ ಆಸ್ಪತ್ರೆ, ಸಾರ್ವಜನಿಕ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಚಿಕಿತ್ಸೆಗಾಗಿ ಬರುವ ರಾಜ್ಯದ ಜನರಿಗೆ ಸಕ್ಕರೆ ಖಾಯಿಲೆ, ರಕ್ತದ ಒತ್ತಡ, ಇನ್ನಿತರೇ ಪ್ರಮುಖ ಖಾಯಿಲೆಗಳಿಗೆ ಸಂಬಂಧಿಸಿದ ಔಷಧಿಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ಸಕ್ಕರೆ ಕಾಯಿಲೆ, ರಕ್ತದ ಒತ್ತಡಕ್ಕೆ ತುತ್ತಾಗುವ ರೋಗಿಗಳು ಜೀವನ ಪರ್ಯಂತ್ಯ ಈ ಔಷಧಗಳನ್ನು ತೆಗೆದುಕೊಳ್ಳಬೇಕಾಗಿರುವುದರಿಂದ ರೋಗಿಗಳಿಗೆ 2 ವಾರಗಳಿಗೊಮ್ಮೆ ಬೇಕಾಗುವ ಔಷಧಗಳನ್ನು ಆಸ್ಪತ್ರೆಗಳಲ್ಲಿ ಉಚಿತವಾಗಿ ನೀಡಲಾಗುತ್ತಿದೆ.

ಸದರಿ ಔಷಧಿಗಳ ಸರಬರಾಜು ಹಾಗೂ ವಿತರಣೆಯಲ್ಲಿ ಯಾವುದೇ ತೊಂದರೆ ಇರುವುದಿಲ್ಲ. ಆಯಾ ಆಸ್ಪತ್ರೆಗಳ ಬೇಡಿಕೆಯ ಆಧಾರದ ಮೇಲೆ ಆಯಾ ವಲಯ/ ಜಿಲ್ಲಾ ಮಟ್ಟದಲ್ಲಿಯೇ ಔಷಧಿಗಳನ್ನು ಪೂರೈಕೆ ಮಾಡಲಾಗುತ್ತಿದೆ.

ಅಗತ್ಯ ಔಷಧಿಗಳನ್ನು ಖರೀದಿಸಲು ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ನ್ಯಾಷನಲ್ ಫ್ರೀ ಡಯಾಗ್ನಾಸ್ಟಿಕ್ಸ್ ಸರ್ವಿಸಸ್- National Free Diagnostic Services(NFDS) ಅಡಿಯಲ್ಲಿಯೂ 2022-23ನೇ ಸಾಲಿನಲ್ಲಿ ರೂ.9385.80ಲಕ್ಷಗಳ ಅನುದಾನ ಮಂಜೂರಾಗಿದ್ದು, ಈ ಪೈಕಿ ಮೊದಲನೇ ತ್ರೈಮಾಸಿಕ ಅನುದಾನದಲ್ಲಿ ರೂ.1877.16ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. ವಿವರಗಳನ್ನು **ಅನುಬಂಧದಲ್ಲಿ** ನೀಡಲಾಗಿದೆ.

...2

ಇದಲ್ಲದೇ ಕೆಲವು ಸಾರ್ವಜನಿಕರು ಹಾಗೂ ಮಧ್ಯಮ ವರ್ಗದ ಜನರು ಖಾಸಗಿ ಆಸ್ಪತ್ರೆ ವೈದ್ಯರುಗಳಿಂದ ಚಿಕಿತ್ಸೆ ಪಡೆದ ಸಂದರ್ಭದಲ್ಲಿ ಬ್ರಾಂಡೆಡ್ (Branded) ಔಷಧಿಗಳ ಸಲಹೆ ಚೀಟಿ-ಪ್ರಿಸ್ಕ್ರಿಪ್ಷನ್ ನೀಡಿರುತ್ತಾರೆ. ಸಕ್ಕರೆ ಖಾಯಿಲೆ, ರಕ್ತದ ಒತ್ತಡಕ್ಕೆ ತುತ್ತಾಗುವ ರೋಗಿಗಳು ಜೀವನ ಪರ್ಯಂತ್ಯ ಈ ಔಷಧಗಳನ್ನು ತೆಗೆದುಕೊಳ್ಳಬೇಕಾಗಿರುವುದರಿಂದ ಸದರಿ ಔಷಧಿಗಳ ದರವು ದುಬಾರಿಯಾಗಿರುತ್ತದೆ. ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ಬ್ರಾಂಡೆಡ್ ಔಷಧಿಗಳ ಬದಲಾಗಿ ಜನರಿಕ್ ಔಷಧಿಗಳನ್ನು ಬಳಸಲು ಜನೌಷಧಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಔಷಧಿ ಕೇಂದ್ರಗಳನ್ನು ಎಲ್ಲಾ ಜಿಲ್ಲೆಗಳಲ್ಲಿ, ತಾಲ್ಲೂಕು ಕೇಂದ್ರಗಳಲ್ಲಿ ಹಾಗೂ ಕೆಲವು ಹೋಬಳಿಗಳಲ್ಲಿಯೂ ಸಹ ಸ್ಥಾಪಿಸಲಾಗಿದೆ.

ಜನೌಷಧಿಗಳ ಗುಣಮಟ್ಟ ಸುರಕ್ಷತೆಯು NABL ಪ್ರಯೋಗಾಲಗಳಲ್ಲಿ ಪರೀಕ್ಷಿಸಿ ಸಾರ್ವಜನಿಕ ಉಪಯೋಗಕ್ಕೆ ಜನೌಷಧಿ ಕೇಂದ್ರಗಳಲ್ಲಿ ದೊರೆಯುವಂತೆ ಮಾಡಲಾಗಿದೆ. ಔಷಧಿಗಳ ಪೈಕಿ 1451 ತರಹದ ಔಷಧಗಳು ಮತ್ತು 240 ತರಹದ ಸರ್ಜಿಕಲ್ ಉಪಕರಣಗಳು, Glucometer, pulse oximeter, consumables ದೊರೆಯುತ್ತದೆ

ಜನರಿಕ್ ಔಷಧಿಗಳು ಸಹ ಬ್ರಾಂಡೆಡ್ (Branded) ಔಷಧಿಗಳಷ್ಟೆ ಗುಣಮಟ್ಟದ ಔಷಧಿಗಳಾಗಿರುತ್ತದೆ. ಈ ಔಷಧಿಗಳು ಬ್ರಾಂಡೆಡ್ ಔಷಧಿಗಳಿಗಿಂತ ಗರಿಷ್ಟ (ಶೇ.50 ರಿಂದ 80 ರಷ್ಟು) ಅಗ್ಗದ ದರದಲ್ಲಿ ದೊರೆಯುತ್ತವೆ. ಈ ಮಳಿಗೆಗಳನ್ನು ಸ್ಥಾಪಿಸುವುದರಿಂದ, ಗುಣಮಟ್ಟ ಔಷಧಿಗಳು ರೋಗಿಗಳಿಗೆ ಮುಖ್ಯವಾಗಿ ಬಡ ಮತ್ತು ಹಿಂದುಳಿದ ವರ್ಗದ ರೋಗಿಗಳಿಗೆ ಅಗ್ಗದ ದರದಲ್ಲಿ ದೊರೆಯುವುದರಿಂದ ಹಾಗೂ ವೈದ್ಯಕೀಯ ಚಿಕಿತ್ಸಾ ವೆಚ್ಚವು ಕಡಿಮೆಯಾಗುವುದರಿಂದ ರೋಗಿಗಳ ಕುಟುಂಬವನ್ನು ಆರ್ಥಿಕ ನಷ್ಟದಿಂದ ಪಾರುಮಾಡಿದಂತಾಗುತ್ತದೆ.

ಈ ಜನೌಷಧಿ ಕೇಂದ್ರಗಳು ಸ್ಥಳೀಯ ಬೇಡಿಕೆಗನುಸಾರವಾಗಿ ಔಷಧಗಳನ್ನು ಸರಬರಾಜು ಮಾಡುತ್ತಾರೆ. ರಾಜ್ಯಕ್ಕೆ ಬೇಕಾಗುವ ಔಷಧಗಳ ದಾಸ್ತಾನು ಮತ್ತು ಸರಬರಾಜು ಮಾಡಲು ಜೀವರಕ್ಷಾ ಡ್ರಗ್ ಹೌಸ್, ಹುಬ್ಬಳ್ಳಿ ಹಾಗೂ ಮಹಾವೀರ್ ಡ್ರಗ್ ಹೌಸ್, ಬೆಂಗಳೂರು ಇವರು ಸರಬರಾಜು ಮಾಡುತ್ತಿದ್ದಾರೆ. ಅದರಂತೆ, ಔಷಧಿಗಳ ಸರಬರಾಜು ಕೊರತೆ ಕಂಡುಬಂದಿರುವುದಿಲ್ಲ.

ಆದ್ದರಿಂದ, ರಾಜ್ಯದಲ್ಲಿರುವ ಬಡ ಜನರ ಆರೋಗ್ಯ ಸುಧಾರಣೆಗಾಗಿ ಬೇಕಾಗುವ ಅವಶ್ಯವಾದ ಸಕ್ಕರೆ ಕಾಯಿಲೆ, ರಕ್ತದ ಒತ್ತಡ, ಇನ್ನಿತರೇ ಪ್ರಮುಖ ಖಾಯಿಲೆಗಳಿಗೆ ಔಷಧಗಳನ್ನು ಒದಗಿಸಲು ಕ್ರಮವಹಿಸಲಾಗಿದೆ.

**ಸಂಖ್ಯೆ: ಆಕುಕ 78 ಎಸ್.ಟಿ.ಕ್ಯೂ 2022**

**(ಡಾ|| ಕೆ.ಸುಧಾಕರ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

## District wise list of Pradhan Mantri Bharatiya Janoushdi Kendra as on 16-09-2022 in Karnataka

| Sl. No. | District | No. of Licenses |
|---|---|---|
| 1 | Bangalore Urban | 285 |
| 2 | Bangalore Rural | 20 |
| 3 | Ramanagar | 11 |
| 4 | Chitradurga | 18 |
| 5 | Davangere | 25 |
| 6 | Kolar | 13 |
| 7 | Chikkaballapur | 08 |
| 8 | Shivamogga | 34 |
| 9 | Tumkur | 41 |
| 10 | Chikkamagaluru | 18 |
| 11 | Dakshina Kannada | 94 |
| 12 | Udupi | 58 |
| 13 | Hassan | 17 |
| 14 | Kodagu | 20 |
| 15 | Mandya | 42 |
| 16 | Mysore | 61 |
| 17 | Chamrajanagar | 15 |
| 18 | Belgavi | 21 |
| 19 | Vijayapur | 35 |
| 20 | Bagalkote | 21 |
| 21 | Dharwad | 43 |
| 22 | Gadag | 14 |
| 23 | Haveri | 30 |
| 24 | Uttara Kannada | 30 |
| 25 | Bellary | 21 |
| 26 | Bidar | 18 |
| 27 | Kalburgi | 16 |
| 28 | Yadgiri | 10 |
| 29 | Raichur | 22 |
| 30 | Koppal | 10 |
| **Total** | | **1071** |

[signature] 14/9/22

Drugs Controller

| Table showing the Calculation of Releases (Sl No 180.6 ) | | | | | |
|---|---|---|---|---|---|
| Sl.No | Facility | Total amount Approved in ROP FY- 2022-23 (Rs in Lakhs ) | Amount that can be allocated to District (i,e., 20% of the amount Approved ) Rs. in Lakhs | Total amount Released to District (Rs. in Lakhs) 1st Round | Total amount Released for Arogya mela (Rs. in Lakhs) |
| 1 | PHC | 6651 | 1330.2 | 430.6 | 0 |
| 2 | CHC | 741.6 | 148.32 | 100.5 | 0 |
| 3 | TH | 1489.2 | 297.84 | 292 | 7.3 |
| 4 | DH | 288 | 57.6 | 52.8 | 0 |
| 5 | State Level Hospital | 144 | 28.8 | 16.5 | 0 |
| 6 | MCH | 72 | 14.4 | 0 | 0 |
| Total | | 9385.8 | 1877.16 | 892.4 | 7.3 |

Directorate ...
Family Welfare ...
Bengaluru-...